ತುಂಬಾ ಆಸೆ ಇತ್ತು ಎಂದರೆ ಸರಿ. ಪಟ್ಟಣಗೆರೆ ಕೌನ್ಸಿಲರ್ ಸೀಟು ಹೆಂಗಸರಿಗೆ ಎಂದು ಮೀಸಲಾತಿ ಆಗಿತ್ತು ಎಂದರೆ ಸರಿ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿಃ**28-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು ಃ ಅರ್ಜಿದಾರರ ಪರ ಶ್ರೀ. ಆರ್.ಸಿ.ಎಸ್ ವಕೀಲರಿಂದ ಃ

29. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.18 ಹಾಗೂ 19 ರಲ್ಲಿ ಉಲ್ಲೇಖವಾದ ಎರಡೂ ಕ್ರಯ ಪತ್ರಗಳಲ್ಲಿ ಸದರಿ ಕ್ರಯ ಪತ್ರ ಒಟ್ಟು ಕುಟುಂಬದ ಬೇರೆ ಸದಸ್ಯರ ಪರವಾಗಿಯೂ ಖರೀದಿಸಿದ ಕ್ರಯ ಪತ್ರ ಎಂದು ಉಲ್ಲೇಖ ಆಗಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಎರಡೂ ಕ್ರಯ ಪತ್ರಗಳಲ್ಲಿ ನನ್ನ

ಹಾಗೂ 2 ನೇ ಎದುರುದಾರರ ಹೆಸರಿನಲ್ಲಿ ಸದರಿ ಕ್ರಯ ಪತ್ರಗಳನ್ನು ಖರೀದಿಸಲು ಉಳಿದ ಒಟ್ಟು ಕುಟುಂಬದ ಸದಸ್ಯರ ಆಕ್ಷೇಪಣೆ ಇಲ್ಲ ಮತ್ತು ಒಟ್ಟು ಕುಟುಂಬದ ಸದಸ್ಯರ ಸಮ್ಮತಿ ಇದೆ ಎಂದೂ ಸಹ ಉಲ್ಲೇಖ ಇಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಆ ಕಾರಣದಿಂದ ನನ್ನ ಮುಖ್ಯ ವಿಚಾರಣೆಯಲ್ಲಿ ಪ್ಯಾರಾ ನಂ.18 ಹಾಗೂ 19 ರಲ್ಲಿ ಹೇಳಿದ ವಿಚಾರಗಳು ಮತ್ತು ಆ ಬಗ್ಗೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

30. ನನ್ನ ತಾಯಿ ಹುಟ್ಟಿದ ಇಸವಿ ನನಗೆ ನೆನಪಿಲ್ಲ. ನನ್ನ ತಾಯಿ 1947 ರಂದು ಹುಟ್ಟಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ನಾನು ವಾಸವಿರುವ ಜಾಗ ಮೂಲತಃ ಜಯಲಕ್ಷ್ಮಮ್ಮ ಎಂಬುವವರಿಗೆ ಸೇರಿದ್ದು ಅವರು ನನಗೆ ಹತ್ತಿರದ ಸಂಬಂಧಿಕರು ಎಂದರೆ ಸರಿ. ಜಯಲಕ್ಷ್ಮಮ್ಮ ಅವರು ನನ್ನ ತಾಯಿಯ ತಂದೆಯ ಅಕ್ಕನ ಮಗಳು. ಜಯಲಕ್ಷ್ಮಮ್ಮ ಅವರಿಗೆ ರಾಮಕೃಷ್ಣಯ್ಯ, ಗಂಗಾಧರಯ್ಯ ಮತ್ತು ರಂಗಸ್ವಾಮಯ್ಯ ಎಂಬ ಸಹೋದರರು ಇದ್ದರು ಎಂದರೆ ಸರಿ. ಇನ್ನೊಬ್ಬರು ಗಂಗೊಂಡಯ್ಯ ಎಂಬುವವರು ಸಹ ಇದ್ದರು ಎಂದರು ಸಾಕ್ಷಿ ನುಡಿಯುತ್ತಾರೆ. ನನ್ನ ಕುಟುಂಬದವರಿಗೂ ಮತ್ತು ಅವರಿಗೂ ಮೊದಲಿನಿಂದಲೂ ಒಡನಾಟ ಇತ್ತು ಎಂದರೆ ಸರಿ.

31. ಜಯಲಕ್ಷ್ಮಮ್ಮ ಅವರು ಜಯಲಕ್ಷ್ಮಮ್ಮ ಲೇಔಟ್ ಅನ್ನು ಸರ್ವೇ ನಂ.38/5 ರಲ್ಲಿ ಮಾಡಿದ್ದರು ಎಂದರೆ ಸರಿ. ಈ ಲೇಔಟ್ ಮಾಡಿದ ವಿಚಾರ ಮನೆಯವರಿಗೆ ಎಲ್ಲರಿಗೂ ಗೊತ್ತಿತ್ತು ಎಂದರೆ ಸರಿ.

ಜಯಲಕ್ಷ್ಮಮ್ಮ ಅವರು ಸೈಟ್ ನಂ.17 ಹಾಗೂ 72 ನ್ನು ನನ್ನ ತಾಯಿಯ ಹೆಸರಿಗೆ ಪ್ರಮಾಣ ಪತ್ರ, ಕರಾರು ಪತ್ರ ಮತ್ತು ಜಿಪಿಎ ಮಾಡಿದ್ದರು ಎಂದರೆ ಸರಿಯಲ್ಲ. ಜಯಲಕ್ಷ್ಮಮ್ಮ ಲೇಔಟಿನಲ್ಲಿಯೇ ಸೈಟ್ ನಂ.17 ಹಾಗೂ 72 ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈ ಎರಡೂ ಸೈಟುಗಳಿಗೂ ನನ್ನ ತಂದೆಯೇ ಹೇಮಂತ್ ಅವರ ಮುಖಾಂತರ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ.

32. ಸೈಟ್ ನಂ.17 ರ ಬಗ್ಗೆ ನನಗೆ ಹೇಗೆ ಮತ್ತು ಯಾವ ಕಾರಣದಿಂದ ಮಾಹಿತಿ ಇದೆ ಎಂದರೆ ಸಾಕ್ಷಿ ಸದರಿ ಸೈಟು ನನ್ನ ತಂಗಿಯ ಗಂಡನದ್ದು ಎಂದು ನುಡಿಯುತ್ತಾರೆ. ತಂಗಿಯ ಗಂಡ ಎಂದರೆ ಕಮಲೇಶ್. ನನ್ನ ತಮ್ಮ ಓಡಾಡಿಕೊಂಡು ನನ್ನ ತಾಯಿಯ ಹೆಸರಿಗೆ 1992 ನೇ ಇಸವಿಯಲ್ಲಿ ಸೈಟ್ ನಂ.17 ಹಾಗೂ 72 ನ್ನು ಮಾಡಿದ್ದರು ಎಂದರೆ ಸರಿಯಲ್ಲ. ನಾವು ಈಗ ವಾಸವಿರುವುದು ಸೈಟ್ ನಂ.17 ರಲ್ಲಿಯೇ. ಸೈಟ್ ನಂ.17 ಹಾಗೂ 72 ರ ಕರಾರು ಪತ್ರ, ಪ್ರಮಾಣ ಪತ್ರ ಹಾಗೂ ಜಿಪಿಎಯನ್ನು ನಾನು ನೋಡಿಲ್ಲ. ಈ ಎಲ್ಲಾ ದಾಖಲೆಗಳನ್ನು ಹೇಮಂತ್ ರವರು ಒ.ಎಸ್.5256/2015 ರ ದಾವೆಯಲ್ಲಿ ಹಾಕಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ನುಡಿಯುತ್ತಾರೆ. ಸೈಟ್ ನಂ.17 ಹಾಗೂ 72 ರ ಕರಾರು ಪತ್ರ, ಪ್ರಮಾಣ ಪತ್ರ ಹಾಗೂ ಜಿಪಿಎಗಳಲ್ಲಿ ಜಯಲಕ್ಷ್ಮಮ್ಮ, ಎಲ್.ಜಿ.ಗಂಗಾಧರಯ್ಯ, ಎಲ್.ಜಿ.ಗಂಗೊಂಡಯ್ಯ ಹಾಗೂ ಎಲ್.ಜಿ.ರಾಮಕೃಷ್ಣಯ್ಯ ಅವರ ಸಹಿ ಇದೆ ಎಂದರೆ ಸಾಕ್ಷಿ ಅದು ಸೃಷ್ಟಿಸಿದ ದಾಖಲೆ ಎಂದು ನುಡಿಯುತ್ತಾರೆ.

ನನಗೆ ಈ ದಾಖಲೆಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೈಟ್ ನಂ.17 ಹಾಗೂ 72 ಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆ ನ್ಯಾಯಾಲಯದಲ್ಲಿ ಬಾಕಿ ಇಲ್ಲ. ಒ.ಎಸ್.5256/2015 ರ ದಾವೆಯಲ್ಲಿ ಶೆಡ್ಯೂಲ್ ಇ ಸೈಟ್ ನಂ.17 ಹಾಗೂ 72 ಎಂದರೆ ಸಾಕ್ಷಿ ಅದನ್ನು ಸೃಷ್ಟಿ ಮಾಡಲಾಗಿದೆ ಎಂದು ನುಡಿಯುತ್ತಾರೆ.

33. ಒ.ಎಸ್.5256/2015 ರ ದಾವೆಯಲ್ಲಿ ನಾನು 2 ನೇ ಪ್ರತಿವಾದಿ. ಎಲ್ಲಾ ಪ್ರತಿವಾದಿಗಳ ಪರವಾಗಿ ನಾನು ತಕರಾರು ಪತ್ರದ ವೆರಿಫೈಯಿಂಗ್ ಆಫಿಡವಿಟ್ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ತಕರಾರಿನಲ್ಲಿ ಎರಡೂ ಸೈಟುಗಳಿಗೆ ಸಂಬಂಧಿಸಿದಂತೆ ಜಿಪಿಎ ಇದೆ ಎಂದು ಬರೆದಿದ್ದು ಅದು ಯಾವುದೇ ರೀತಿಯ ಹಕ್ಕುಗಳನ್ನು ನೀಡುತ್ತಿಲ್ಲ ಎಂದು ನಾನು ಹೇಳಿದ್ದೇನೆ ಎಂದರೆ ಸುಳ್ಳು.

34. ಸೈಟ್ ನಂ.17 ಯಾವ ಆಧಾರದ ಮೇಲೆ ಕಮಲೇಶ್ ಅವರ ಸೈಟ್ ಎಂದು ಹೇಳುತ್ತೇನೆ ಎಂದರೆ ಸಾಕ್ಷಿ ಕಮಲೇಶ್ ಅವರ ತಾಯಿಯಿಂದ ಅವರಿಗೆ ದಾನ ಬಂದಿದೆ ಎಂದು ನುಡಿಯುತ್ತಾರೆ. ಕಮಲೇಶ್ ಅವರ ತಾಯಿಯ ಹೆಸರು ಲಕ್ಷ್ಮಮ್ಮ. ಲಕ್ಷ್ಮಮ್ಮ ಅವರ ಬಳಿ ಸೈಟ್ ನಂ.17 ಯಾವತ್ತೂ ಇದ್ದಿರಲಿಲ್ಲ ಆ ಕಾರಣದಿಂದ ದಾನ ಮಾಡುವ ಪ್ರಶ್ನೆಯೇ ಬರುವುದಿಲ್ಲಎಂದರೆ ಸರಿಯಲ್ಲ. ಈ ಎಲ್ಲಾ ಮಾಹಿತಿಗಳು ನನಗೆ ಸರಿಯಾಗಿದೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

35. ಕಳೆದ ಬಾರಿಯ ಪಾಟಿ ಸವಾಲಿನ ಪ್ಯಾರಾ ನಂ.5 ರಲ್ಲಿ ನಾನು ಮನೆಯ ಖರ್ಚು ವೆಚ್ಚಗಳನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದು ನನ್ನ ತಾಯಿಗೆ ಆದಾಯ ಬಾಡಿಗೆ ಬರುತ್ತದೆ. ನನ್ನ ತಾಯಿಗೆ ಸ್ವತ್ತು ನಂ.9/1, 9/4, 9/9, 9/11 ಹಾಗೂ 9/22 ಗಳ ಆಸ್ತಿಗಳಿಂದ ಬಾಡಿಗೆ ಬರುತ್ತದೆ. ನನ್ನ ತಾಯಿಗೆ ತಿಂಗಳಿಗೆ ರೂ.4,00,000/-ಗಳಷ್ಟು ಬಾಡಿಗೆ ಬರುತ್ತದೆ. ನನ್ನ ತಾಯಿ ಮೇಲೆ ಹೇಳಿದ ಸ್ವತ್ತುಗಳ ಬಾಡಿಗೆದಾರರೊಂದಿಗೆ ಮಾಡಿಕೊಂಡ ಬಾಡಿಗೆ ಕರಾರು ಪತ್ರವನ್ನು ನಾನು ನೋಡಿದ್ದೇನೆ. 2018-19 ರಿಂದ ನನ್ನ ತಾಯಿಗೆ ಬಾಡಿಗೆ ಬರುತ್ತದೆ. ಅದಕ್ಕೂ ಮೊದಲು ನನ್ನ ತಮ್ಮ ಮುಂಗಡ ಹಣ ತೆಗೆದುಕೊಂಡಿದ್ದು ಅದನ್ನು 4 ವರ್ಷ ನಾನು ತೀರಿಸಿದ್ದೇನೆ. ನನ್ನ ತಮ್ಮ ಮುಂಗಡ ಹಣ ತೆಗೆದುಕೊಳ್ಳುತ್ತಿದ್ದ ಎಂದು ತೋರಿಸಲು ನನ್ನ ಬಳಿ ಹಳೆ ಕರಾರು ಪತ್ರಗಳಿವೆ. ನನ್ನ ತಮ್ಮ ಮುಂಗಡ ಹಣ ತೆಗೆದುಕೊಳ್ಳುತ್ತಿದ್ದನ್ನು ನಾನು ಚುಕ್ತ ಮಾಡಿ ಆ ಬಳಿಕ ನನ್ನ ತಾಯಿ ಬಾಡಿಗೆ ತೆಗೆದುಕೊಳ್ಳುತ್ತಿದ್ದರು. ಸದರಿ ಚುಕ್ತ ಮಾಡಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು 4 ಜನರ ಮುಂಗಡ ಹಣವನ್ನು ಚುಕ್ತ ಮಾಡಿದ್ದೇನೆ ಮತ್ತು ಸದರಿ ಚುಕ್ತ ಮಾಡಿದ ಹಣದ ಮೊತ್ತ ರೂ.20,00,000/-. ರೂ.20,00,000/-ಗಳನ್ನು ನಗದಾಗಿ ಪಾವತಿ ಮಾಡಿದ್ದೀರಾ ಅಥವಾ ಚೆಕ್ ಮುಖಾಂತರ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಬಾಡಿಗೆ ಇಂದ ಅವರ ಮುಂಗಡ ಹಣವನ್ನು ಕಡಿತ

ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ 4 ಬಾಡಿಗೆದಾರರ ಹೆಸರು ಮುನೀರ್ ಅಹಮದ್, ರಾಮಮೂರ್ತಿ, ಇನ್ನು ಉಳಿದ 2 ಜನರ ಹೆಸರು ನನಗೆ ನೆನಪಾಗುತ್ತಿಲ್ಲ. ನಾನು ಈ ಮೇಲೆ ಹೇಳಿದ ಹೆಸರುಗಳನ್ನು ನಾನು ಸೃಷ್ಟಿಸಿದ್ದೇನೆ ಮತ್ತು ಈಗ ನನಗೆ ಆ ರೀತಿಯಾಗಿ ಬೇರೆ ಹೆಸರುಗಳನ್ನು ಸೃಷ್ಟಿ ಮಾಡಲಾಗುತ್ತಿಲ್ಲ ಎಂದರೆ ಸರಿಯಲ್ಲ. 2015 ರಿಂದಲೇ ನಾನು ಬಾಡಿಗೆಯನ್ನು ಸಂಗ್ರಹಿಸುತ್ತಿದ್ದೇನೆ ಎಂದರೆ ಸಾಕ್ಷಿ ಕೆಲವು ಮನೆಗಳಲ್ಲಿ ನಾನು ಬಾಡಿಗೆ ಸಂಗ್ರಹಿಸಿದ್ದೇನೆ ಎಂದು ನುಡಿಯುತ್ತಾರೆ. ಎಲ್ಲಾ ಆಸ್ತಿಗಳಿಂದಲೂ 2015 ರಿಂದ ನಾನೇ ಬಾಡಿಗೆ ಹಣವನ್ನು ಸಂಗ್ರಹಿಸುತ್ತಿದ್ದೇನೆ ಎಂದರೆ ಸರಿಯಲ್ಲ.

36. ನನ್ನ ತಾಯಿ ಬಾಡಿಗೆ ಹಣ ಸಂಗ್ರಹಿಸುತ್ತಿದ್ದಾರೆ ಎಂದು ನಾನು ಹೇಳಿದ್ದು ಅವರು ಆ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ. ನಾನು ಬಾಡಿಗೆಯನ್ನು ಕೆಲವು ಸಮಯ ಚೆಕ್ ಮೂಲಕವೂ ಕೆಲವನ್ನು ನಗದಾಗಿಯೂ ತೆಗೆದುಕೊಳ್ಳುತ್ತೇನೆ. ಕೆಲವು ಕರಾರು ಪತ್ರಗಳು ನನ್ನ ತಾಯಿಯ ಹೆಸರಿನಲ್ಲಿಯೂ ಕೆಲವು ಕರಾರು ಪತ್ರಗಳು ನನ್ನ ಹೆಸರಿನಲ್ಲಿಯೂ ಇದೆ. ಯಾವ ಯಾವ ಕರಾರು ಪತ್ರಗಳು ನನ್ನ ಹೆಸರಿನಲ್ಲಿದೆ ಎಂದು ನಾನು ನೋಡಿ ಹೇಳಬೇಕು. ನನಗೆ ಈ ವಿಚಾರ ಗೊತ್ತಿದ್ದರೂ ಸಹ ನೋಡಿ ಹೇಳಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಗ್ರಹಿಸುತ್ತಿದ್ದ ಬಾಡಿಗೆಯನ್ನು ಉಳಿದ ಒಟ್ಟು ಕುಟುಂಬದ ಸದಸ್ಯರ ಜೊತೆ ನಾನು ಹಂಚಿಕೊಳ್ಳುತ್ತಿರಲಿಲ್ಲ.

37. ನನ್ನ ತಾಯಿ ಈಗಲೂ ಸಹ ನನ್ನ ಜೊತೆಯೇ ಇದ್ದಾರೆ. ಗುಣಶೀಲ ಹಾಗೂ ಸಿಂಚನಾ ಸಹ ನಮ್ಮ ಜೊತೆಯೇ ಇದ್ದಾರೆ. 2011 ರಿಂದಲೂ ಅವರು ನಮ್ಮ ಜೊತೆಯೇ ಇದ್ದಾರೆ.

38. ನಾನು ಬಾಡಿಗೆ ಸಂಗ್ರಹಿಸುತ್ತಿದ್ದ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡಿದ್ದೇನೆ. ನಾನು 1989-90 ರಿಂದಲೂ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. 2015 ರಿಂದ ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ಆದಾಯ ತೆರಿಗೆಯಲ್ಲಿ ಯಾವ ಯಾವ ಆಸ್ತಿಗಳಿಂದ ನಾನು ಬಾಡಿಗೆ ಸಂಗ್ರಹಿಸುತ್ತಿದ್ದೇನೆ ಎಂದು ಉಲ್ಲೇಖ ಆಗಿದೆ ಎಂದರೆ ಸಾಕ್ಷಿ ನಾನು ಅದನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ.

39. ನನ್ನ ಮಾವ ನನ್ನ ಮದುವೆಯನ್ನು ಬಂಟ್ಸ್ ಸಂಘ, ವಿಜಯನಗರ ಛತ್ರದಲ್ಲಿ ಮಾಡಿದ್ದರು. ಬಂಟ್ಸ್ ಸಂಘದಲ್ಲಿ ನನ್ನ ಮದುವೆಯನ್ನು ವಿಜ್ರಂಭಣೆಯಿಂದ ಮಾಡಿದ್ದರು ಎಂದರೆ ಸರಿ. ನನ್ನ ಮಾವ ನನ್ನ ಮದುವೆಯನ್ನು ಮಾಡಿದ ಸಂದರ್ಭದಲ್ಲಿ ಅವರ ಮಗಳಿಗೆ ಸಾಕಷ್ಟು ಚಿನ್ನಾಭರಣಗಳು, ನಗದು ಹಾಗೂ ಒಂದು ಸೈಟನ್ನು ನೀಡಿದ್ದರು ಎಂದರೆ ಸುಳ್ಳು. ನನ್ನ ಮದುವೆಯ ಸಂದರ್ಭದಲ್ಲಿ ನನಗೂ ಸಹ ಸಾಕಷ್ಟು ಉಡುಗೊರೆಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಕೆಟ್ಟ ಚಟಗಳಿಂದಾಗಿ ನನಗೆ ಕೊಟ್ಟಿರುವ ಉಡುಗೊರೆಗಳು ಮಾತ್ರವಲ್ಲದೇ ನನ್ನ ಹೆಂಡತಿಗೆ ನೀಡಿದ

ಉಡುಗೊರೆಗಳನ್ನೂ ಸಹ ನಾನು ಕಳೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

40. ಮಾಲಾ ಅವರಿಗೆ ಸರ್ವೇ ನಂ.3 ರಲ್ಲಿ ನನ್ನ ತಂದೆ ಸೈಟ್ ನಂ.17/1 ನ್ನು ನೀಡಿದ್ದರು ಎಂದರೆ ಸರಿ. ಅಲ್ಲಿ ನನ್ನ ತಂದೆ ಒಂದು ಕಟ್ಟಡ ಕಟ್ಟಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಟ್ಟಡದಿಂದ ಸಾಕಷ್ಟು ಬಾಡಿಗೆ ಬರುತ್ತಿತ್ತು ಎಂದರೆ ಸರಿಯಲ್ಲ. ಸೈಟ್ ನಂ.17/1 ರಲ್ಲಿ ಈಗ ಮಾಲಾ ಅವರು ಕಟ್ಟಡ ಕಟ್ಟಿಸಿಕೊಂಡಿದ್ದಾರೆ. ಯಾವಾಗ ಕಟ್ಟಡ ಕಟ್ಟಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಮಾಲಾ ಅವರಿಗೆ ಯಾವುದೇ ರೀತಿಯ ಆದಾಯ ಇಲ್ಲ ಮತ್ತು ಅವರು ಕಟ್ಟಡ ಕಟ್ಟಿಸಿಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

41. ಸಾಕ್ಷಿಗೆ ಈಗ 3 ದಾಖಲೆಗಳನ್ನು ತೋರಿಸಿ ಸದರಿ ದಾಖಲೆಗಳ ಪ್ರಕಾರ ವಿಜಯಾ, ತ್ರಿವೇಣಿ ಹಾಗೂ ಮಾಲಾ ಅವರಿಗೆ ನೀಡಿದ ದಾನ ಪತ್ರ ಹಾಗೂ ಆ ಸಂಬಂಧದ ಆಸ್ತಿಗಳ ಋಣಭಾರ ಪತ್ರ ಎಂದರೆ ಸಾಕ್ಷಿ ಋಣಭಾರ ಪತ್ರಗಳನ್ನು ಸಾಕ್ಷಿ ಒಪ್ಪುತ್ತಾರೆ ಆದರೆ ಉಳಿದ ದಾಖಲೆಗಳ ಬಗ್ಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಋಣಭಾರ ಪತ್ರಗಳನ್ನು ನಿ.ಪಿ.4 ರಿಂದ ನಿ.ಪಿ.6 ಎಂದು ಗುರುತಿಸಲಾಯಿತು.

42. ಸಾಕ್ಷಿಗೆ ನಿ.ಪಿ.4 ರಲ್ಲಿದ್ದ ದಸ್ತಾವೇಜು ನಂಬ್ರ, ಪುಟ ಸಂಖ್ಯೆ ದಿನಾಂಕವನ್ನು ತೋರಿಸಿ ಅದೇ ನಂಬ್ರ, ಪುಟ ಸಂಖ್ಯೆ ಹಾಗೂ ದಿನಾಂಕ ನಿ.ಪಿ.4 ರ ಜೊತೆಗೆ ಇರುವ ದಾನ ಪತ್ರದಲ್ಲಿ ಉಲ್ಲೇಖ ಆಗಿದೆ ಎಂದರೆ ಸರಿ ಎಂದು ಸಾಕ್ಷಿ ಒಪ್ಪುತ್ತಾರೆ.

43. ಸಾಕ್ಷಿಗೆ ನಿ.ಪಿ.5 ರಲ್ಲಿದ್ದ ದಸ್ತಾವೇಜು ನಂಬ್ರ, ಪುಟ ಸಂಖ್ಯೆ ದಿನಾಂಕವನ್ನು ತೋರಿಸಿ ಅದೇ ನಂಬ್ರ, ಪುಟ ಸಂಖ್ಯೆ ಹಾಗೂ ದಿನಾಂಕ ನಿ.ಪಿ.5 ರ ಜೊತೆಗೆ ಇರುವ ದಾನ ಪತ್ರದಲ್ಲಿ ಉಲ್ಲೇಖ ಆಗಿದೆ ಎಂದರೆ ಸರಿ ಎಂದು ಸಾಕ್ಷಿ ಒಪ್ಪುತ್ತಾರೆ.

44. ಅದೇ ರೀತಿ ಸಾಕ್ಷಿಗೆ ನಿ.ಪಿ.6 ರಲ್ಲಿದ್ದ ದಸ್ತಾವೇಜು ನಂಬ್ರ, ಪುಟ ಸಂಖ್ಯೆ ದಿನಾಂಕವನ್ನು ತೋರಿಸಿ ಅದೇ ನಂಬ್ರ, ಪುಟ ಸಂಖ್ಯೆ ಹಾಗೂ ದಿನಾಂಕ ನಿ.ಪಿ.6 ರ ಜೊತೆಗೆ ಇರುವ ದಾನ ಪತ್ರದಲ್ಲಿ ಉಲ್ಲೇಖ ಆಗಿದೆ ಎಂದರೆ ಸರಿ ಎಂದು ಸಾಕ್ಷಿ ಒಪ್ಪುತ್ತಾರೆ.

45. ನನ್ನ ತಂದೆ ಅವರ ಮೂರೂ ಜನ ಹೆಣ್ಣುಮಕ್ಕಳಿಗೆ ಒಂದೇ ದಿನ ದಾನ ಪತ್ರಗಳನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದು ನನಗೆ ಗೊತ್ತಿಲ್ಲವೇ ಎಂದರೆ ಸಾಕ್ಷಿ ನನಗೆ ಗೊತ್ತಿದೆ ಆದರೆ ತಾರೀಖು ಗೊತ್ತಿಲ್ಲ ಎಂದು ನುಡಿಯುತ್ತಾರೆ.

46. ನನ್ನ ಮೂರೂ ಜನ ಭಾವಂದಿರು ನನ್ನ ಹತ್ತಿರದ ಸಂಬಂಧಿಕರಾದ ಕಾರಣ ನಮ್ಮ ಮನೆಯ ವಿಚಾರ ಹಾಗೂ ಸಂಗತಿಗಳು ಅವರಿಗೆ ಮೊದಲಿನಿಂದಲೂ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನನ್ನ ಮೂರೂ ಜನ ಭಾವಂದಿರನ್ನು ಚಿಕ್ಕ ವಯಸ್ಸಿನಿಂದಲೇ ನೋಡಿದ್ದರು ಎಂದರೆ ಸರಿ.

47. ರಾಮಯ್ಯ ಅವರಿಗೆ ಈಗ ಸುಮಾರು 62-63 ವರ್ಷ ವಯಸ್ಸಾಗಿರಬಹುದು. ಅವರಿಗೆ ಬಿಪಿ ಮತ್ತು ಡಯಾಬಿಟಿಸ್ ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಅವರು ಯಾವುದೇ ತರಹದ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

48. ಹನುಮಂತಯ್ಯ ಅವರು ಈಗ ನಿವೃತ್ತಿ ಆಗಿದ್ದಾರೆ. ಕಮಲೇಶ್ ಅವರು 2 ನೇ ಮದುವೆ ಆದ ನಂತರ ಬೇರೆಯೇ ವಾಸವಾಗಿದ್ದಾರೆ ಎಂದರೆ ಅವರು ಅವರ ಕುಟುಂಬದ ಜೊತೆ ಇದ್ದಾರೆ ಎಂದು ನುಡಿಯುತ್ತಾರೆ. ಕಮಲೇಶ್ ಅವರ ಆದಾಯದ ಮೂಲ ವ್ಯಾಪಾರ, ರಿಯಲ್ ಎಸ್ಟೇಟ್ ಹಾಗೂ ಫ್ಯಾಕ್ಟರಿ. ದಾವಾ ಆಸ್ತಿಯಲ್ಲಿ ಯಾವುದೆಲ್ಲಾ ಬಾಡಿಗೆ ಬರುತ್ತದೊ ಅದನ್ನು ನಾನು ಕಮಲೇಶ್ ಅವರಿಗೂ ಸಹ ಭಾಗ ನೀಡುತ್ತಿದ್ದೇನೆ ಎಂದರೆ ಸುಳ್ಳು. ನಾನು ಯಾವೆಲ್ಲಾ ಬಾಡಿಗೆ ಹಣವನ್ನು ನಗದಾಗಿ ತೆಗೆದುಕೊಳ್ಳುತ್ತಿದ್ದೇನೋ ಅದನ್ನು ಕಮಲೇಶ್ ಅವರಿಗೆ ನೀಡುತ್ತಿದ್ದೆ ಎಂದರೆ ಸುಳ್ಳು.

49. ವಿಜಯಾ ಅವರು ಹುಟ್ಟಿದ ಇಸವಿ ನೆನಪಿಲ್ಲ. ವಿಜಯಾ 1965 ರಲ್ಲಿ ಹುಟ್ಟಿರಬಹುದು. ನನ್ನ ತಂದೆ ತಾಯಿ ಮದುವೆ ಆದದ್ದು 1963-64 ರಲ್ಲಿ.

50. ಈ ಅರ್ಜಿಯಲ್ಲಿ ನನ್ನ ಮುಖ್ಯ ತಕರಾರು ಏನು ಎಂದರೆ ನನ್ನ ತಮ್ಮ ವಿಲ್ಲನ್ನು ಸೃಷ್ಟಿಸಿದ್ದಾರೆ ಎಂದು ನುಡಿಯುತ್ತಾರೆ. ಅದಲ್ಲದೇ ನನ್ನ ಬಳಿ ಬೇರೆ ಯಾವುದೇ ತಕರಾರು ಇಲ್ಲ. ನನ್ನ ತಕರಾರಿನಲ್ಲಿ ಇದ್ದ ಎಲ್ಲಾ ವಿಚಾರಗಳನ್ನು ಕಮಲೇಶ್ ಅವರು ವಕೀಲರಿಗೆ ತಿಳಿಸಿ ಬರೆಸಿದ್ದಾರೆ ಎಂದರೆ ಸುಳ್ಳು.

51. ಮಾಲಾ ಅವರು 2001 ರಲ್ಲಿ ಕೌನ್ಸಿಲರ್ ಚುನಾವಣೆಗೆ ನಿಂತ ಸಂದರ್ಭದಲ್ಲಿ ನಮ್ಮ ಇಡೀ ಕುಟುಂಬ ಅವರಿಗೆ ಬೆಂಬಲಿಸಿತ್ತು ಎಂದರೆ ಸರಿ. ಮಾಲಾ ಅವರು ಗೆಲ್ಲಲು ನನ್ನ ತಂದೆಯೇ ಕಾರಣ ಎಂದರೆ

ಸುಳ್ಳು. ಮಾಲಾ ಅವರ ಚುನಾವಣೆಯ ಪೂರ್ತಿ ಖರ್ಚು ವೆಚ್ಚಗಳನ್ನು ನನ್ನ ತಂದೆ ನೋಡಿಕೊಂಡಿದ್ದರು ಎಂದರೆ ಸುಳ್ಳು.

52. ನಿ.ಪಿ.4 ರಿಂದ 6 ರ ಜೊತೆಗಿರುವ ದಾನ ಪತ್ರಗಳನ್ನು ಹೆಣ್ಣುಮಕ್ಕಳ ಮದುವೆಯಾದ ಹಲವಾರು ವರ್ಷಗಳ ನಂತರ ನೀಡಲಾಗಿದೆ ಎಂದರೆ ಸರಿ. ಹತ್ತಿರದ ಸಂಬಂಧದಲ್ಲಿ ಮದುವೆಯಾಗಿ ನನ್ನ ತಂದೆ ಅವರ ಉದ್ಧಾರಕ್ಕಾಗಿ ಕಷ್ಟ ಪಟ್ಟಿದ್ದರೂ ಸಹ ಅಳಿಯಂದಿರು ಉದ್ಧಾರ ಆಗದ ಕಾರಣ ಹೆಣ್ಣುಮಕ್ಕಳ ಭವಿಷ್ಯಕ್ಕಾಗಿ ದಾನ ಪತ್ರಗಳನ್ನು ನೀಡಲಾಗಿತ್ತು ಎಂದರೆ ಸುಳ್ಳು. ದಾನ ಮಾಡಿದ ನಂತರ ಹೆಣ್ಣು ಮಕ್ಕಳಿಗೆ ಬಾಡಿಗೆ ಬರಲಿ ಎಂದು ನನ್ನ ತಂದೆ ಸದರಿ ಸೈಟುಗಳಲ್ಲಿ ಕಟ್ಟಡ ಕಟ್ಟಿಸಿದ್ದರು ಎಂದರೆ ಸುಳ್ಳು. ಹೆಣ್ಣು ಮಕ್ಕಳಿಗೆ ಏನೆಲ್ಲಾ ನೀಡಬೇಕೋ ಅದನ್ನೆಲ್ಲಾ ನನ್ನ ತಂದೆ ನೀಡಿದ್ದಾರೆ ಎಂದರೆ ಸರಿಯಲ್ಲ. ಇಷ್ಟೆಲ್ಲಾ ಮಾಡಿದ್ದರೂ ನನ್ನ ಭಾವಂದಿರಾದ ರಾಮಯ್ಯ ಹಾಗೂ ಕಮಲೇಶ್ ಅವರು ನನ್ನ ತಂದೆಯ ಆಸ್ತಿಗಳ ಮೇಲೆ ಕಣ್ಣಿಟ್ಟಿದ್ದರು ಎಂದರೆ ಸುಳ್ಳು.

53. ಸರ್ವೇ ನಂ.4 ರಲ್ಲಿ 9 ರ ಸೀರೀಸಿನಲ್ಲಿ ಒಟ್ಟು 6 ಆಸ್ತಿಗಳಿವೆ ಎಂದರೆ ಸಾಕ್ಷಿ ಒಟ್ಟು 5 ಆಸ್ತಿಗಳಿವೆ ಎಂದು ನುಡಿಯುತ್ತಾರೆ. ಸರ್ವೇ ನಂ.4 ರಲ್ಲಿ 9 ರ ಸೀರೀಸಿನಲ್ಲಿ 9/1, 9/4, 9/9, 9/11, 9/19 ಹಾಗೂ 9/22 ಒಟ್ಟು 6 ಆಸ್ತಿಗಳಿವೆ ಎಂದರೆ ಸಾಕ್ಷಿ 9/19 ಈಗ ಇಲ್ಲ ಎಂದು ನುಡಿಯುತ್ತಾರೆ. ಸ್ವತ್ತು ನಂ.9/19 ಈಗಲೂ ಸಹ ಇದೆ ಎಂದರೆ ಸರಿಯಲ್ಲ. ಸರ್ವೇ ನಂ.4 ರಲ್ಲಿ ಬಂದ ಆಸ್ತಿಯನ್ನು ನನ್ನ ತಂದೆಯೇ

ಕೈಗಾರಿಕಾ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯೇ ಭೂಪರಿವರ್ತನೆ ಮಾಡಿದ್ದು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೂಪರಿವರ್ತನೆ ಆದ ನಂತರ ಈ ಸ್ವತ್ತುಗಳಿಗೆ ನಂ.59 ಎಂದು ನಂಬರ್ ಬಂದಿತ್ತು ಎಂದರೆ ಸರಿ. ಆ ಬಳಿಕ 59 ರಿಂದ 9 ರ ಸೀರೀಸ್ ಬಂದಿದೆ ಎಂದರೆ ಸರಿ. 1984 ರಲ್ಲಿ ಆದ ವಿಭಾಗ ಪತ್ರದ ಪ್ರಕಾರ 9 ರ ಸೀರೀಸ್ ಸ್ವತ್ತುಗಳು ನನ್ನ ತಂದೆಗೆ ಬಂದಿತ್ತು ಎಂದರೆ ಸರಿ. 1963-64 ರಲ್ಲಿ ನನ್ನ ತಂದೆಗೆ ಮದುವೆಯಾದ ನಂತರ ಸ್ವತ್ತು ನಂ.9/1 ರಲ್ಲಿ ಅವರು ಮನೆ ಕಟ್ಟಿಸಿದ್ದರು ಎಂದರೆ ಸಾಕ್ಷಿ ನನ್ನ ತಾತ ಕಟ್ಟಿಸಿದ್ದರು ಎಂದು ನುಡಿಯುತ್ತಾರೆ.

54. ಸ್ವತ್ತು ನಂ.9/19 ನನ್ನ ತಂದೆ ನನ್ನ ತಾಯಿಯ ಭವಿಷ್ಯಕ್ಕಾಗಿ ದಾನ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಸದರಿ ದಾನ ಪತ್ರವೇ ತನ್ನ ತಾಯಿಗೆ ಮಾಡಿಕೊಟ್ಟ ದಾನ ಪತ್ರ ಎಂದರೆ ಸಾಕ್ಷಿ ಒಪ್ಪುತ್ತಾರೆ. ಸದರಿ ದಾನ ಪತ್ರವನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಸದರಿ ಪತ್ರದ ಹಿನ್ನೆಲೆ ನನಗೆ ಗೊತ್ತಿದೆ. ನಿ.ಪಿ.7 ನ್ನು ನನ್ನ ತಂದೆಯವರು ನಮ್ಮ ಮನೆಯ ಎಲ್ಲಾ ಸದಸ್ಯರಿಗೂ ತಿಳಿಸಿ ಆ ಬಳಿಕ ಮಾಡಿದ್ದರು ಎಂದರೆ ಸರಿಯಲ್ಲ. ಸ್ವತ್ತು ನಂ.9/19 ಕ್ಕೆ ನನ್ನ ತಾಯಿ ನನ್ನ ಹೆಸರಿಗೆ ಒಂದು ದಾನ ಪತ್ರ, ಒಂದು ತಿದ್ದುಪಡಿ ಪತ್ರ ಮತ್ತು ತ್ರಿವೇಣಿಯವರ ಹೆಸರಿಗೆ ಒಂದು ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಮೂರೂ

ದಾಖಲೆಗಳನ್ನು ನಿ.ಪಿ.8 ರಿಂದ 10 ಎಂದು ಗುರುತಿಸಲಾಯಿತು. ನಿ.ಪಿ.8 ರಲ್ಲಿ ಸಾಕ್ಷಿದಾರರು ಕಮಲೇಶ್ ಹಾಗೂ ರಾಮಯ್ಯ ಎಂದರೆ ಸರಿ. ನಿ.ಪಿ.10 ರಲ್ಲಿ ನಾನು ಹಾಗೂ ಕಮಲೇಶ್ ಅವರು ಸಾಕ್ಷಿದಾರರು ಎಂದರೆ ಸರಿ. ದಾನ ಪತ್ರ ಹಾಗೂ ತಿದ್ದುಪಡಿ ಪತ್ರಗಳನ್ನು ಸ್ಟಾಂಪ್ ವೆಂಡರ್ ಬಳಿ ಮಾಡಿಸಿದ್ದೇವೆ ಎಂದರೆ ಸರಿ. ಕಮಲೇಶ್ ಅವರೇ ಈ ಮೇಲೆ ಹೇಳಿದ ನಿ.ಪಿ.8 ರಿಂದ 10 ರ ದಾಖಲೆಗಳನ್ನು ಅವರ ಪರಿಚಯದ ಸ್ಟಾಂಪ್ ವೆಂಡರ್ ಬಳಿ ಮಾಡಿಸಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯೇ ಸದರಿ ದಾಖಲೆಗಳನ್ನು ಮಾಡಿಸಿದ್ದರು. ನಿ.ಪಿ.8 ರಿಂದ 10 ರ ದಾಖಲೆಗಳನ್ನು ಯಾವ ಸ್ಟಾಂಪ್ ವೆಂಡರ್ ಬಳಿ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ವಯಸ್ಸಾಗಿದ್ದು ಅವರಿಗೆ ಹೋಗಲು ಸಾಧ್ಯವಿಲ್ಲದ ಕಾರಣ ಕಮಲೇಶ್ ಅವರೇ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ಸದರಿ ದಾಖಲೆಗಳನ್ನು ಮಾಡಿಸಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಸದರಿ ದಾಖಲೆಗಳನ್ನು ಯಾವಾಗ ಮಾಡಿಸಿದ್ದರು, ಯಾವ ಬಳಿ ಮಾಡಿಸಿದ್ದರು ಎಂದು ನನಗೆ ಜ್ಞಾಪಕ ಇಲ್ಲ. ನಿ.ಪಿ.8 ರಿಂದ 10 ರ ದಾಖಲೆಗಳನ್ನು ಮಾಡಿಸಿದ ನಂತರ ಈ ವಿಚಾರವನ್ನು ಒಟ್ಟು ಕುಟುಂಬದ ಸದಸ್ಯರಿಗೆ ತಿಳಿಸಿದ್ದೀರಾ ಎಂದರೆ ತಿಳಿಸಲಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ವಿಚಾರವನ್ನು ಯಾವಾಗ ತಿಳಿಸಿದ್ದಾರೆ ಎಂದು ನನ್ನ ತಾಯಿಯನ್ನು ಕೇಳಬೇಕು. ನಿ.ಪಿ.8 ರಿಂದ 10 ರ ದಾಖಲೆಗಳನ್ನು ಮಾಡುವ ಮೊದಲು ಕಾನೂನು ಸಲಹೆ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನನ್ನ ತಾಯಿಯನ್ನು

ಕೇಳಬೇಕು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಯಾವುದೇ ಕಾನೂನು ಸಲಹೆ ತೆಗೆದುಕೊಂಡಿಲ್ಲ. ನನ್ನ ಭಾವ ಕಮಲೇಶ್ ಅವರು ಒಟ್ಟು ಕುಟುಂಬದ ಸದಸ್ಯರಿಗೆ ಯಾರಿಗೂ ಸಹ ಹೇಳದೆ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ನಿ.ಪಿ.8 ರಿಂದ 10 ರ ದಾಖಲೆಗಳನ್ನು ಮಾಡಿಸಿದ್ದಾರೆ ಎಂದರೆ ಸುಳ್ಳು. ಕಮಲೇಶ್, ರಾಮಯ್ಯ ಹಾಗೂ ತ್ರಿವೇಣಿಯವರು ಆಸ್ತಿಗಳನ್ನು ಲಪಟಾಯಿಸುವ ಉದ್ದೇಶಕ್ಕಾಗಿ ನಿ.ಪಿ.8 ರಿಂದ 10 ರ ದಾಖಲೆಗಳನ್ನು ಮಾಡಿಸಿದ್ದಾರೆ ಎಂದರೆ ಸುಳ್ಳು. ಕಮಲೇಶ್, ರಾಮಯ್ಯ ಹಾಗೂ ತ್ರಿವೇಣಿಯವರ ಷಡ್ಯಂತ್ರದಲ್ಲಿ ನಾನೂ ಸಹ ಭಾಗಿಯಾಗಿದ್ದೆ ಎಂದರೆ ಸುಳ್ಳು.

55. ಓ.ಎಸ್.8804/2015 ರಲ್ಲಿ ಹೇಮಂತ್ ಅವರು 1 ನೇ ಪ್ರತಿವಾದಿ ಎಂದರೆ ಸರಿ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿ ಲಿಖಿತ ತಕರಾರು ಹಾಕಿರುವುದನ್ನು ನಾನು ಓದಿದ್ದೇನೆ. ಸದರಿ ತಕರಾರು ಪತ್ರದಲ್ಲಿ ಸೈಟ್ ನಂ.9/19 ರ ಬಗ್ಗೆ ಉಲ್ಲೇಖ ಮಾಡಿರುವುದನ್ನು ನಾನು ನೋಡಿದ್ದೇನೆ ಎಂದರೆ ಸಾಕ್ಷಿ ಅವರು ಉಲ್ಲೇಖ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನ್ನ ತಮ್ಮ ನಿ.ಪಿ.8 ರಿಂದ 10 ರ ದಾಖಲೆಗಳನ್ನು ಮತ್ತು ನನ್ನ ತಂದೆ ನನ್ನ ತಾಯಿಗೆ ಮಾಡಿಕೊಟ್ಟ ದಾನಪತ್ರವನ್ನೂ ಸಹ ಹಾಜರುಪಡಿಸಿದ್ದಾರೆ ಎಂದರೆ ಸುಳ್ಳು.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**